ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದು postman ಗಳ ಒಂದು ವರದಿ ಆಧಾರದ ಮೇಲೆ 350 ಜನರಿಗೆ pension ಹೋಗಬೇಕಾಗಿರುವವರು ತೀರಿ ಹೋಗಿದ್ದಾರೆಂದು ಹೇಳಿ, ಅವರಿಗೆ ಹೋಗಬೇಕಾದ ಮಾಸಾಶನವನ್ನು ನಿಲ್ಲಿಸಿದ್ದರು. ಈಗ ಅವರು ಜೀವಂತವಾಗಿರುವುದನ್ನು ದೃಢೀಕರಿಸಿ ಮತ್ತೆ ಅವರಿಗೆ ಮಾಸಾಶನ ಕೊಡಬೇಕೆಂದು ಟ್ರೆಜರಿ ಇಲಾಖೆಯಿಂದ ಸೂಚನೆ ಹೋಗಿದೆ. ಅವರೆಲ್ಲರಿಗೂ ಮಾಸಾಶನ ಮಂಜೂರು ಮಾಡಿ ಕೊಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ.

ಶ್ರೀ ಜಿ. ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದಕ್ಕೆ 7 ತಿಂಗಳು ತೆಗೆದುಕೊಂಡಿದ್ದಾರೆ,

ಅಧ್ಯಕ್ಷರು: ಆಯಿತು. ಮಾನ್ಯ ಲೋಬೋರವರೆ ಹೇಳಿ.

xii) ವಿಷಯ: ಬಡ ಮೀನುಗಾರರು ಮನೆಗಳನ್ನು ಕಟ್ಟಿಕೊಂಡು ವಾಸವಿರುವುದರಿಂದ ಅವರುಗಳಿಗೆ ನಿವೇಶನಗಳನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಜೆ. ಆರ್. ಲೋಬೋ (ಮಂಗಳೂರು ನಗರ ದಕ್ಷಿಣ): ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕು ಕಸಬಾ ಬೆಂಗ್ರೆ ಮತ್ತು ತೋಟ ಬೆಂಗ್ರೆಯಲ್ಲಿ ಬಡ ಮೀನುಗಾರರು ಸುಮಾರು 60 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸವಿರುವುದರಿಂದ ಅವರುಗಳಿಗೆ ನಿವೇಶನವನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕು ಕಸಬಾ ಬೆಂಗ್ರೆ ಮತ್ತು ತೋಟ ಬೆಂಗ್ರೆಯಲ್ಲಿ ಸುಮಾರು 200 ರಿಂದ 250

ಬಡ ಮೀನುಗಾರರ ಕುಟುಂಬಗಳು ಸುಮಾರು 50 ರಿಂದ 60 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದು ಇವರಿಗೆ ಈವರೆಗೂ ನಿವೇಶನ ಮನೆ ಮಂಜೂರಾತಿ ಹಾಗೂ ವಿದ್ಯುತ್ ಸೌಲಭ್ಯ ನೀಡಲಾಗುತ್ತಿಲ್ಲ. ಮನೆ ನಂಬರ್, ಪಡಿರತ ಕಾರ್ಡುಗಳನ್ನು ನೀಡದಿರುವುದರಿಂದ ಇವರ ಸ್ಥಿತಿ ಶೋಚ ನೀಯವಾಗಿದೆ. ಆದ್ದರಿಂದ ಕಷ್ಟದಲ್ಲಿರುವ ಕುಟುಂಬಗಳಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆದಿದ್ದಾರೆ. ಅದಕ್ಕೆ ಉತ್ತರವಾಗಿ

ಮಂಗಳೂರು ತಾಲೂಕು ಕಸಬಾ ಬೆಂಗ್ರೆ ಮತ್ತು ತೋಟ ಬೆಂಗ್ರ ಗ್ರಾಮವು ಸರಕಾರದ ಆರ್‌ಡಿ 94/2–12–1995 ರಂತೆ ಕಂದಾಯ ಗ್ರಾಮ ವಾಗಿರುತ್ತದೆ. ಇಲ್ಲಿ ಒಟ್ಟು 1 ರಿಂದ 52 ಸರ್ವೆ ಕಂಬಗಳನ್ನ ಒಳಗೊಂಡು ಭೌಗೋಳಿಕ ವಿಸ್ತೀರ್ಣ 577.49 ಎಕರೆ ಇರುತ್ತದೆ. ಬೆಂಗ್ರೆ ಗ್ರಾಮವು ಪ್ರಕೃತ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುತ್ತದೆ. ಇಲ್ಲಿ ಹಲವಾರು ವರ್ಷಗಳಿಂದ ವಾಸಿಸುತ್ತಿರುವ ಮೀನುಗಾರರಿಗೆ ಮನೆ ಕಟ್ಟಿ ಮತ್ತು ನಿವೇಶನ ನೀಡಲಾಗಿದೆ.

ಇದರ ಪಶ್ಚಿಮದ ಸಮುದ್ರ ಬದಿಯಲ್ಲಿ ಸುಮಾರು 250 ಕ್ಕಿಂತಲೂ ಮೇಲ್ಪಟ್ಟು ಮೀನುಗಾರರ ಮನೆ, ಗುಡಿಸಲು ಇರುತ್ತವೆ. ಈ ಜಮೀನು ಸಮುದ್ರ ಬದಿಯ ಜಮೀನಾಗಿರುವುದರಿಂದ ಸರ್ವೆ ಕಂಬ ಇರುವುದಿಲ್ಲ. ಅವುಗಳಿಗೆ ಸರ್ವೇ ಮಟ್ಟ ಇಲ್ಲದೆ ಇರುವುದರಿಂದ ಮತ್ತು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಗಿರುವುದರಿಂದ ಹಕ್ಕು ಪತ್ರ ಮಂಜೂರು ಮಾಡಲು ಅವಕಾಶ ಇರುವುದಿಲ್ಲ.

ಶ್ರೀ ಜೆ. ಆರ್. ಲೋಬೋ: ಮಂಗಳೂರು ತಾಲ್ಲೂಕು ಕಸಬಾ ಬೆಂಗ್ರೆ ಮತ್ತು ತೋಟ ಬೆಂಗ್ರೆ ಎಂಬ ಪ್ರದೇಶಗಳಲ್ಲಿ ಸುಮಾರು 50–60 ವರ್ಷಗಳಿಂದ 250ಕ್ಕೂ ಹೆಚ್ಚಿಗೆ ಬಡ ಕುಟುಂಬಗಳ ಮೀನುಗಾರರು ವಾಸ ಇದ್ದಾರೆ. ಈ ವಿಷಯವಾಗಿ ಸರ್ಕಾರದಿಂದ ಉತ್ತರ ಕೊಟ್ಟಿದ್ದು. ಅವರಿಗೆ ಸರ್ವೆ ನಂಬರ್ ಇಲ್ಲದೇ ಇರುವ ಕಾರಣ ಹಕ್ಕು ಪತ್ರವನ್ನು ಕೊಟ್ಟಿಲ್ಲವೆಂದು

ತಿಳಿಸಿದ್ದಾರೆ. ಆದರೆ ಅವರಿಗೆ ಕನಿಷ್ಠ ಸೌಲಭ್ಯಗಳಾದ ತಾತ್ಕಾಲಿಕ ಮನೆ ನಂಬರ್, ರೇಷನ್ ಕಾರ್ಡ ಮತ್ತು ವಿದ್ಯುಚ್ಛಕ್ತಿ ಇಷ್ಟಾದರೂ ಕೊಡುವಂಥ ವ್ಯವಸ್ಥೆಯನ್ನಾದರೂ ಸರ್ಕಾರ ಮಾಡಬೇಕು. ಅವರು 60 ವರ್ಷಗಳಿಂದ ಅಲ್ಲಿರುವಂಥದ್ದು ಇದೆ, ಆದರೆ ಅವರಿಗೆ ಸರ್ವೆ ನಂಬರ್ ಇಲ್ಲವೆಂಬ ಕಾರಣದಿಂದ ಸೌಲಭ್ಯಗಳನ್ನು ಕೊಟ್ಟಿಲ್ಲ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಪಶ್ಚಿಮದ ಸಮುದ್ರ ಬದಿಯಲ್ಲಿ ಸುಮಾರು 250ಕ್ಕೂ ಹೆಚ್ಚು ಮೀನುಗಾರರ ಮನೆ, ಗುಡಿಸಲುಗಳಿವೆ. ಆದರೆ ಜಮೀನು ಸಮುದ್ರ ಬದಿ ಇರುವುದರಿಂದ ಈ ಜಮೀನಿಗೆ ಯಾವುದೇ ಸರ್ವೆ ನಂಬರ್ ಇರುವುದಿಲ್ಲ. ಮತ್ತೆ ಇದು ಮಹಾನಗರ ಪಾಲಿಕೆ ವ್ಯಾಪ್ತಿ ಯಲ್ಲಿರುವ ಕಾರಣ ಇವರಿಗೆ ಹಕ್ಕು ಪತ್ರ ಮಂಜೂರು ಮಾಡಲು ಅವಕಾಶ ಆಗಿಲ್ಲ. ಆದ್ದರಿಂದ ಈ ಜಮೀನನ್ನು ಯಾವುದಾದರೂ ನಗರಸಭೆಯ ವ್ಯಾಪ್ತಿಗೆ ತೆಗೆದುಕೊಂಡು ಅದರ ಮುಖಾಂತರ ಹಕ್ಕು ಪತ್ರಗಳನ್ನು ವಿತರಣೆ ಮಾಡಿ, ಅವರಿಗೆ ವಾಸದ ದೃಢೀಕರಣವಾದ ಮೇಲೆ ಪಡಿತರ ಕಾರ್ಡ ಇನ್ನಿತರ ಸೌಲಭ್ಯಗಳನ್ನು ಕೊಡುವುದಕ್ಕೆ . . .

ಶ್ರೀ ಜೆ. ಆರ್. ಲೋಬೋ: ಮಾನ್ಯ ಅಧ್ಯಕ್ಷರೆ, ತಾತ್ಕಾಲಿಕವಾಗಿ ಅವರಿಗೆ ವಿದ್ಯುಚ್ಛಕ್ತಿ, ರೇಷನ್ ಕಾರ್ಡ ಇಂಥ ಮೂಲಕ ಅವಶ್ಯಕತೆಗಳನ್ನು ಕೊಡುವಂಥ ವ್ಯವಸ್ಥೇ ಮಾಡಿದರೆ ಸಾಕು. ಅವರಿಗೆ ಹಕ್ಕು ಪತ್ರ ಮತ್ತೆ ನೋಡಬಹುದು.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಇದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡೋಣ.

ಅಧ್ಯಕ್ಷರು: ಓಕೆ, ಮಾನ್ಯ ಹೆಚ್. ಕೆ. ಕುಮಾರಸ್ವಾಮಿ ಹೇಳಿ.